ಹಿರೇಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಸಾರಿಗೆ ಬಸ್ಸುಗಳನ್ನು ಒದಗಿಸುವುದು

880 (1015) ಶ್ರೀ ಬನ್ನಿಕೋಡ್ . ಬಿ. ಹೆಚ್. (ಹಿರೇಕೆರೂರು) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವೇರಿ ಜಿಲ್ಲೆ ಹಿರೇ ಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಸಾರಿಗೆ ಬಸ್ ವ್ಯವಸ್ಥೆ ತೃಪ್ತಿಕರವಾಗಿಲ್ಲದ್ದರಿಂದ ಗ್ರಾಮೀಣ ಜನರ ಸಮಸ್ಯೆಗೆ ಪರಿಹಾರ ಒದಗಿಸಲು ಹತ್ತು ಬಸ್ಸುಗಳಿಗೆ ಮಾನ್ಯ ಸಚಿವರು ಅನುಮೋದನೆ ನೀಡಿರುವ ಬಗ್ಗೆ ಸರ್ಕಾರ ಕೈಗೊಂಡ ಕ್ರಮವೇನು?

ಆ) ಗ್ರಾಮೀಣ ಜನರಿಗೆ ಅವಶ್ಯವಿರುವಂತೆ ಇನ್ನೂ 9 ವಾಹಗಳನ್ನು ಪೂರೈಸಿ ಸಾರಿಗೆ ಸಂಪರ್ಕ ಕಲ್ಪಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಸಿ. ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕಿನಲ್ಲಿ ಗ್ರಾಮೀಣ ಪ್ರಯಾಣಿಕರ ಸಾರಿಗೆ ಸಂಸ್ಥೆಗಳಿಗೆ ಪರಿಹಾರ ಒದಗಿಸಲು ಇದುವರೆಗೆ ಒಟ್ಟು 8 ಹೊಸ ಬಸ್ಸುಗಳನ್ನು ಹಿರೇಕೆರೂರು ಘಟಕಕ್ಕೆ ಪೂರೈಸಲಾಗಿದೆ. ಹಾಗೂ ಸದ್ಯದಲ್ಲಿಯೇ ಇನ್ನೂ 3 ಬಸ್ಸುಗಳನ್ನು ಒದಗಿಸಿ ಗ್ರಾಮೀಣ ಸಾರಿಗೆ ವ್ಯವಸ್ಥೆ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಆ) ಹೆಚ್ಚಿಗೆ 3 ವಾಹನಗಳನ್ನು ಪೂರೈಸಿ ಗ್ರಾಮೀಣ ಜನವರಿಗೆ ಸಾರಿಗೆ ಸೌಲಭ್ಯ ಉತ್ತಮ ಪಡಿಸಲು ಕ್ರಮ ಕೈಗೊಳ್ಳಲಾಗುವುದು.

ಚಿಂತಾಮಣಿ ನಗರದಲ್ಲಿ ಬಸ್ ನಿಲ್ದಾಣ ನಿರ್ಮಾಣ

883(836) ಶ್ರೀ ಚೌಡರೆಡ್ಡಿ(ಚಿಂತಾಮಣಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ನಗರದಲ್ಲಿ ಖಾಸಗಿ ಬಸ್ ನಿಲ್ದಾಣ, ಲಾರಿಗಳ ತಂಗುದಾಣ ಹಾಗೂ ವಾಹನಗಳ ರಿಪೇರಿ ಅಂಗಡಿಗಳಿಗೆ ಪ್ರತ್ಯೇಕ ಸ್ಥಳ ಸೂಚಿಸಲಾಗಿದೆಯೇ;

ಆ) ಈ ಬಗ್ಗೆ ಏನಾದರೂ ರೂಪು- ರೇಷಗಳು ಮತ್ತು ಅಂದಾಜು ಪಟ್ಟಿ ತಯಾರಿಸಲಾಗಿದೆಯೆ;

ಇ) ಅಂದಾಜು ಮಾಡಿದ್ದರೆ ತಾರೀಖು ಮತ್ತು ಮೊಬಲಗು ತಿಳಿಸುವರು;

ಈ) ಈಗ ಈಯೋಜನೆಯನ್ನು ಕೈಬಿಡ ಲಾಗಿದೆಯೇ?

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

ಅ) ಹೌದು, ಬಸ್ ನಿಲ್ದಾಣ, ಟ್ರಕ್ ಟರ್ಮಿನಲ್ ಮತ್ತು ಪ್ಲಾಟ್‌ಫಾರಂ, ನಿರ್ಮಿಸಲು ಚೇಳೂರು ರಸ್ತೆಯಿಂದ ರಾಮಕುಂಟಿಯವರೆಗೆ ರಸ್ತೆ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ. ಲಾರಿಗಳ ತಂಗುದಾಣ ಹಾಗೂ ವಾಹನಗಳ ರಿಪೇರಿ ಅಂಗಡಿಗಳಿಗಾಗಿ ರಾಮಕುಂಟೆ ಪ್ರದೇಶದಲ್ಲಿ ಪ್ರತ್ಯೇಕ ಸ್ಥಳ ಗುರುತಿಸಲಾಗಿದೆ.

ಅ) ಹೌದು, ಹತ್ತನೇ ಹಣಕಾಸು ಆಯೋಗದ ಯೋಜನೆಯಡಿಯಲ್ಲಿ ಬಸ್ ನಿಲ್ದಾಣ ಮತ್ತು ಟ್ರಕ್ ಟರ್ಮಿನಲ್ ನಿರ್ಮಾಣದ ಸಲುವಾಗಿ ಚೇಳೂರು ರಸ್ತೆಯಿಂದ ರೇಷ್ಮೆ ಬಿತ್ತನೆ ಕೋಠಿಯವರೆಗೆ ಜಲ್ಲಿ ಕಲ್ಲು ರಸ್ತೆ ನಿರ್ಮಾಣಕ್ಕಾಗಿ ರೂ. 2. 50,000 ಟರ್ಮಿನಲ್‌ಗೆ ಗ್ರಾವೆಲ್ ತುಂಬಿ ಪ್ಲಾಟ್ ಫಾರಂ, ಮಾಡಲು ರೂ, 2, 15, 100ಗಳಿಗೆ ಅಂದಾಜನ್ನು ತಯಾರಿಸಿದ್ದು, ಸದರಿ ಕಾಮಗಾರಿಗಳು ಈಗಾಗಲೇ ಪೂರ್ಣಗೊಂಡಿವೆ. ಉಳಿದ ಕಾಮಗಾರಿಗಳಾದ ಬಸ್ ನಿಲ್ದಾಣ, ಲಾರಿಗಳ ತಂಗುದಾಣ, ಅಂಗಡಿ ಮಳಿಗೆಗಳ, ಕಾಮ ಗಾರಿಗಳು ಬಾಕಿ ಉಳಿದಿರುತ್ತದೆ. ಬಾಕಿ ಉಳಿದಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಅಂದಾಜು ಪಟ್ಟಿಯನ್ನು ತಯಾರಿಸಿರುವುದಿಲ್ಲ.

ಇ) ಪ್ರಶ್ನೆ 'ಅ' ಗೆ ಸಂಬಂಧಿಸಿದಂತೆ ನೀಡಿರುವ ಉತ್ತರದಲ್ಲಿ ತಿಳಿಸಿರುವ ಎರಡು ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಒಟ್ಟು ಮೊತ್ತ ರೂ. 4, 65, 000ಗಳೀಗೆ ದಿನಾಂಕ 3- 10- 98ರಂದು ಅಂದಾಜನ್ನು ತಯಾರಿಸಲಾಗಿದೆ.

ಈ) ಬಾಕಿ ಉಳಿದಿರುವ ಬಸ್ ನಿಲ್ದಾಣ, ಲಾರಿಗಳ ತಂಗುದಾಣ ಹಾಗೂ ಅಂಗಡಿ ಮಳಿಗೆಗಳ ಕಾಮಗಾರಿಗಳನ್ನು ಆರ್ಥಿಕ ಪರಿಸ್ಥಿತಿಯನ್ನು ಅನುಸರಿಸಿ ಹಂತ ಹಂತವಾಗಿ ಕೈಗೆತ್ತಿಕೊಳ್ಳಲಾಗುವುದು.

ಬಗರ್ ಹುಕುಂ ಸಾಗುವಳಿ ಸಕ್ರಮಗೊಳಿಸುವುದು

884(100 i) ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡು ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 199 1- 92 ರಿಂದ 2000- 200 1 ರ ವರೆಗೆ ಬಗರ್ ಹುಕುಂ ಸಾಗುವಳಿ ಮಾಡುತ್ತಿರುವವರು ಖಾಯಂಗೊಳಿಸಲು ಎಷ್ಟು ಜನ ಅರ್ಜಿಗಳನ್ನು ಕೊಟ್ಟಿರುತ್ತಾರೆ; ಬಗರ್ ಹುಕುಂ ರೀತ್ಯಾ ಸಕ್ರಮಗೊಳಿಸಿ ಚೀಟಿಗಳನ್ನು ಎಷ್ಟು ಜನರಿಗೆ ನೀಡಿರುತ್ತೀರಿ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಮಂಜೂರಾದವರಿಗೆ ಸಾಗುವಳಿ ಆಗಿದ್ದಲ್ಲಿ ಸಾಗುವಳಿ ಚೀಟಿ ಗಳನ್ನು ನೀಡಿರುವುದು ಮತ್ತು ನೀಡದ್ದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಇ) 2000- 200 1 ರ ವರೆಗೂ ಎಷ್ಟು ಜನರಿಗೆ ಸಾಗುವಳಿ ಚೀಟಿ ಮಂಜೂರಾಗಿರುವುದಿಲ್ಲ; ಈ ಬಗ್ಗೆ ಯಾವ ಕ್ರಮ ಸರ್ಕಾರ ತೆಗೆದುಕೊಳ್ಳಲು ತೀರ್ಮಾನಿಸಿದೆ?

ಶ್ರೀ ಹೆಚ್. ಸಿ. ಶ್ರೀ ಕಂಠಯ್ಯ (ಕಂದಾಯ ಸಚಿವರು) :

ಅ) ಬಂದಿದೆ

ಸ್ವೀಕರಿಸಿರುವ ಅರ್ಜಿಗಳ ಸಂಖ್ಯೆ	ಸಕ್ರಮೀಕರಿಸಿರುವ ಅರ್ಜಿಗಳ ಸಂಖ್ಯೆ	ಸಾಗುವಳಿ ನೀಡಲಾಗಿರುವ ಪ್ರಕರಣಗಳ ಸಂಖ್ಯೆ
1) ನಮೂನೆ 50ರಲ್ಲಿ 10. 89 ಲಕ್ಷ	3. 72 ಲಕ್ಷ	2. 82 ಲಕ್ಷ
2) ನಮೂನೆ 53ರಲ್ಲಿ 10. 92 ಲಕ್ಷ	-	-